

بِسۡمِ اللّٰہِ الرَّحۡمٰنِ الرَّحِیۡمِ

# ಪತ್ನಿಯರೊಂದಿಗೆ ಸದ್ವರ್ತನೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 19-05-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಲ್ಲಾಹನು ಅವತೀರ್ಣಗೊಳಿಸಿದ ಉಪದೇಶಗಳು ನಮ್ಮ ಪ್ರತಿಯೊಂದು ವ್ಯವಹಾರಗಳಲ್ಲಿ ಮಾರ್ಗದರ್ಶನ ನೀಡುತ್ತವೆ. ನಮ್ಮ ಪೈಕಿ ಪ್ರತಿಯೊಬ್ಬನು ಈ ಉಪದೇಶಗಳ ಪ್ರಕಾರ ಕಾರ್ಯನಿರತನಾಗುವುದಾದರೆ ಒಂದು ಸುಂದರ ಸಮಾಜ ಸ್ಥಾಪಿತವಾಗಬಹುದಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಅಸಂಖ್ಯಾತ ಆಜ್ಞೆಗಳಿವೆ. ಈ ಎಲ್ಲವನ್ನೂ ಅಲ್ಲಾಹನು ಒಂದು ವಾಕ್ಯದಲ್ಲಿ ಜಮಾಯಿಸಿ ಹೇಳಿರುವನು: لَقَدۡ كَانَ لَكُمۡ فِيۡ رَسُوۡلِ اللّٰهِ اُسۡوَةٌ حَسَنَةٌ **ಲಖದ್ ಕಾನ ಲಕುಮ್ ಫೀ ರಸೂಲಿಲ್ಲಾಹಿ ಉಸ್‌ವತುನ್ ಹಸನ.** ನಿಶ್ಚಯವಾಗಿಯೂ ನಿಮಗೆ ಅಲ್ಲಾಹನ ಸಂದೇಶವಾಹಕರಲ್ಲಿ ಒಳ್ಳೆಯದಾದ ಮಾದರಿ ಇದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತವು ಮನೆಯಿಂದ ಪ್ರಾರಂಭಿಸಿ ಸಮಾಜದ ತನಕ ಪವಿತ್ರ ಖುರ್‌ಆನಿನ ಎಲ್ಲ ಆಜ್ಞೆಗಳನ್ನು ಪಾಲಿಸುವ ರೀತಿಯಲ್ಲಿತ್ತು. ನಮಗೆ ವಾಸ್ತವಿಕ ಜಯಲಭಿಸಲು ಸಾಧ್ಯವಾಗುವುದು ನಾವು ನಮ್ಮ ಎಲ್ಲ ವಿಷಯಗಳಲ್ಲಿಯೂ ಈ ಉತ್ತಮ ಮಾದರಿಯನ್ನು ನಮ್ಮ ಮುಂದೆ ಇರಿಸಿದಾಗ ಮಾತ್ರವಾಗಿದೆ. ಮನುಷ್ಯನು ದೊಡ್ಡ ದೊಡ್ಡ ವ್ಯವಹಾರಗಳಲ್ಲಿ ಬಹಳ ಉತ್ತಮವಾದ ರೀತಿಯಲ್ಲಿ ವರ್ತಿಸುವುದು ಕಾಣುತ್ತದೆ. ಆದರೆ ಬಾಹ್ಯವಾಗಿ ಚಿಕ್ಕದಾಗಿ ಕಾಣುವ ಕೆಲವು ವ್ಯವಹಾರಗಳಿಗೆ ಸಂಬಂಧಿಸಿ ಎಷ್ಟು ನಿರ್ಲಕ್ಷ್ಯದಿಂದ ಮನುಷ್ಯನು ವರ್ತಿಸುತ್ತಾನೆಂದರೆ ಅವುಗಳಿಗೆ ಮಹತ್ವವೇ ಇಲ್ಲ ಎಂಬಂತೆ ವರ್ತಿಸುತ್ತಾನೆ. ನಾವು ನಮ್ಮ ಜೀವಿತವನ್ನು ಸಾಂತ್ವನ ಭರಿತವನ್ನಾಗಿ ಮಾಡಲು ಬಯಸುವುದಾದರೆ, ನಾವು ಅಲ್ಲಾಹನ ಅನುಗ್ರಹ ಗಳಿಸಲು ಬಯಸುವುದಾದರೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರತಿಯೊಂದು ವ್ಯವಹಾರದಲ್ಲಿ ತಮ್ಮ ಸ್ವಭಾವಗುಣಗಳನ್ನು ಪ್ರಕಟಿಸಿದ ರೀತಿಯಲ್ಲಿ ಮತ್ತು ಈ ಕಾಲಘಟ್ಟದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯ ಸಂಧನಾದ ಗುಲಾಮರಾಗಿ ಆಗಮಿಸಿದ ಹಝ್ರತ್ ವಾಗ್ದತ್ತ ಮಸೀಹ್ ಅಲೈಹಿಸ್ಸಲಾಮರು ಅವುಗಳನ್ನು ನಮಗೆ ವಿವರಿಸಿಕೊಟ್ಟ ರೀತಿಯಲ್ಲಿ ಅವುಗಳನ್ನು ನಮ್ಮ ಜೀವಿತದ ಭಾಗವನ್ನಾಗಿ ಮಾಡಬೇಕು.

ಇದಕ್ಕೆ ಸಂಬಂಧಿಸಿ ಇಂದು ನಾನು ಪುರುಷರಿಗೆ ವಿವಿಧ ಪರಿಸ್ಥಿತಿಗಳಲ್ಲಿ ಇರಬೇಕಾದ ಹೊಣೆಗಾರಿಕೆಗಳನ್ನು ವಿವರಿಸುವೆನು. ಪುರುಷನಿಗೆ ಮನೆಯ ಯಜಮಾನ ಎಂಬ ಹೊಣೆಗಾರಿಕೆಗಳಿವೆ. ಪತಿ ಎಂಬ ನೆಲೆಯಲ್ಲಿಯೂ ಹೊಣೆಗಾರಿಕೆಗಳಿವೆ. ಪಿತನೆಂಬ ನೆಲೆಯಲ್ಲೂ ಪುತ್ರನೆಂಬ ನೆಲೆಯಲ್ಲಿಯೂ ಹೊಣೆಗಾರಿಕೆಗಳಿವೆ. ಪ್ರತಿಯೊಬ್ಬ ಪುರುಷ ಈ ಹೊಣೆಗಾರಿಕೆಗಳನ್ನು ಮನವರಿಕೆ ಮಾಡಿಕೊಂಡು ಅವುಗಳನ್ನು ಈಡೇರಿಸಲು ಪ್ರಯತ್ನ ಮಾಡುವುದಾದರೆ ಸಮಾಜದಲ್ಲಿ ಶಾಂತಿ ಸ್ಥಾಪಿತವಾಗುವುದು. ಅದು ಪ್ರೀತಿ ಮತ್ತು ಭ್ರಾತೃಭಾವ ಸ್ಥಾಪಿಸುವ ಮಾರ್ಗವಾಗುವುದು. ಇವುಗಳು ಮಕ್ಕಳನ್ನು ತರಬೇತಿಗೊಳಿಸುವ, ಶಾಂತಿಪ್ರಿಯ ಮತ್ತು ಮಾನವಹಕ್ಕುಗಳನ್ನು ಸ್ಥಾಪಿಸುವ ಪೀಳಿಗೆ ಹಬ್ಬುವ ಮಾರ್ಗವಾಗುವುದು. ಮನೆಯಲ್ಲಿ ಶಾಂತಿ ಇವುಗಳ ಮೂಲಕವೇ ಸ್ಥಾಪಿತವಾಗುತ್ತದೆ. ಇಂದಿನ ಕಾಲದಲ್ಲಿ ಅನೇಕ ಮನೆಗಳಿಂದ ದೂರುಗಳು ಬರುತ್ತಾ ಇವೆ- ಪತಿ ತನ್ನ ಪತ್ನಿಯನ್ನು ಗೌರವಿಸುವುದಿಲ್ಲ ಎಂದೂ ಆಕೆಗೆ ಸಲ್ಲಬೇಕಾದ ಹಕ್ಕುಗಳನ್ನು ನೀಡುವುದಿಲ್ಲ ಎಂದೂ ಮಕ್ಕಳ ತರಬೇತಿಯ ಬಗ್ಗೆ ಇರುವ ಹೊಣೆಗಾರಿಕೆಗಳನ್ನು ನಿಭಾಯಿಸುವುದಿಲ್ಲ ಎಂದೂ ಪುರುಷನು ಕೇವಲ ನಾಮ ಮಾತ್ರ ಯಜಮಾನನಾಗಿರುತ್ತಾನೆಂದೂ ದೂರುಗಳು ಬರುತ್ತಾ ಇರುತ್ತವೆ. ಹಿಂದೂಸ್ಥಾನದಿಂದಲೂ ಪಾಕಿಸ್ಥಾನದಿಂದಲೂ ಬರುವ ದೂರುಗಳಲ್ಲಿ ಪುರುಷರು ಪತ್ನಿಯರನ್ನು ಹೊಡೆದು ಬಡಿದು ರಕ್ತ ಹೆಪ್ಪುಗಟ್ಟಿ ನೀಲ ಕಲೆಗಳು ಕಾಣಿಸುವಂತೆ ಮಾಡುತ್ತಾರೆ, ಗಾಯಗೊಳಿಸುತ್ತಾರೆ, ಮುಖ ತಿರುವುತ್ತಾರೆ ಎಂದೆಲ್ಲಾ ದೂರುಗಳು ಬರುತ್ತವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ನಂತರ ಸಹ ಮೂಢ ಜನರ ಹಾಗೆ ಜೀವಿಸುವುದಾದರೆ, ತಮ್ಮ ಸ್ಥಿತಿಯನ್ನು ಬದಲಾಯಿಸುವುದಾಗಿ ಪ್ರತಿಜ್ಞೆ ಮಾಡಿ ಬೈಅತ್ ಮಾಡಿದುದರ ಯಾವ ಪ್ರಯೋಜನವೂ ಸಿಗಲಾರದು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮನೆಯ ಯಜಮಾನ ಎಂಬ ನೆಲೆಯಲ್ಲಿ ತೌಹೀದ್ ಸ್ಥಾಪನೆ ಮಾಡುವ ಮಹತ್ವವನ್ನು ತಮ್ಮ ಪತ್ನಿ ಮತ್ತು ಮಕ್ಕಳಿಗೆ ಸ್ಪಷ್ಟಪಡಿಸಿ ಅದರ ಪ್ರಕಾರ ಕರ್ಮಗಳನ್ನು ಮಾಡುವಂತೆ ಮಾಡಿದರು. ಈ ಕೆಲಸವನ್ನು ಪ್ರೀತಿಯಿಂದಲೂ ವಾತ್ಸಲ್ಯದಿಂದಲೂ ಮಾಡಿಸಿದರು. ದಂಡ ಪ್ರಯೋಗದಿಂದಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅವರ ಕಾರ್ಯಭಾರದಿಂದ ಬಿಡುವು ಇಲ್ಲವಾದರೂ ತಮ್ಮ ಕುಟುಂಬದ ಹಕ್ಕುಗಳನ್ನು ಪ್ರೀತಿಯಿಂದಲೂ ವಾತ್ಸಲ್ಯದಿಂದಲೂ ಈಡೇರಿಸಿಕೊಟ್ಟರು. ನಿಮ್ಮ ಪ್ರಥಮ ಹೊಣೆಗಾರಿಕೆ ತೌಹೀದ್ ಸ್ಥಾಪಿಸುವುದಾಗಿದೆ, ಅಲ್ಲಾಹನನ್ನು ಆರಾಧನೆ ಮಾಡಬೇಕಾಗಿದೆ ಎಂದು ಅವರಿಗೆ ಮನದಟ್ಟು ಮಾಡಿಕೊಟ್ಟರು. ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೇಳುತ್ತಾರೆ: ಪ್ರವಾದಿವರ್ಯರು ರಾತ್ರಿ ನಫ್ಲ್ ನಮಾಝ್ ನಿರ್ವಹಿಸಲು ಎದ್ದೇಳುತ್ತಿದ್ದರು. ಅನಂತರ ಸುಬ್‌ಹ್ ನಮಾಝ್‌ಗೆ ಸ್ವಲ್ಪ ಮೊದಲು ನೀರು ಚಿಮುಕಿಸಿ ನಮ್ಮನ್ನು ಎಬ್ಬಿಸುತ್ತಿದ್ದರು. ಅವರು ಹೇಳುತ್ತಿದ್ದರು, ನಫ್ಲ್ ನಮಾಝ್ ಅನುಷ್ಠಿಸಿರಿ, ಇತರ ಆರಾಧನೆಗಳನ್ನು ಮಾಡಿರಿ, ಅಲ್ಲಾಹನ ಹಕ್ಕುಗಳನ್ನು ಈಡೇರಿಸಿರಿ.

ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮನೆ ಕೆಲಸಗಳ ಬಗ್ಗೆ ಹೀಗೆ ಹೇಳುತ್ತಾರೆ: ಪ್ರವಾದಿವರ್ಯರು ತನ್ನ ಬಟ್ಟೆ ತಾನೇ ಹೊಲಿಯುತ್ತಿದ್ದರು. ಪಾದರಕ್ಷೆ ಸಹ ಸ್ವತಃ ಹೊಲಿಯುತ್ತಿದ್ದರು. ಮನೆಯ ನೀರಿನ ಡೋಲು ಮೊದಲಾದುವುಗಳನ್ನು ದುರುಸ್ತಿ ಮಾಡುತ್ತಿದ್ದರು. ಈ

ಉದಾಹರಣೆಗಳನ್ನು ತಮ್ಮ ಮುಂದೆ ಇರಿಸಿ ಪತಿಯಂದಿರು ತಮ್ಮನ್ನು ಪರಿಶೋಧಿಸಬೇಕು. ಒಂದು ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಸತ್ಯವಿಶ್ವಾಸಿಗಳಲ್ಲಿ ಪರಿಪೂರ್ಣ ವಿಶ್ವಾಸಿಗಳಾದವರು ತಮ್ಮ ಸ್ವಭಾವ ಗುಣಗಳಲ್ಲಿ ಉತ್ತಮರಾಗಿರುತ್ತಾರೆ. ನಿಮ್ಮ ಪೈಕಿ ಉತ್ತಮ ಸ್ವಭಾವದವರು ತಮ್ಮ ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸುವವರಾಗಿದ್ದಾರೆ. ಆದುದರಿಂದ ತನ್ನ ಪತ್ನಿಯೊಂದಿಗೆ ಉತ್ತಮವಾಗಿ ವರ್ತಿಸದ ಪ್ರತಿಯೊಬ್ಬನು ತನ್ನನ್ನು ಪರಿಶೋಧಿಸಬೇಕು. ಇದು ಸತ್ಯವಿಶ್ವಾಸದ ಔನ್ನತ್ಯದ ಚಿಹ್ನೆಯೂ ಆಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪತಿಯ ಹೊಣೆಗಾರಿಕೆಗಳು ಮತ್ತು ಪತ್ನಿಯೊಂದಿಗೆ ಉತ್ತಮವಾಗಿ ವರ್ತಿಸುವ ಬಗ್ಗೆ ಹೀಗೆ ಹೇಳಿದರು: ಅಶ್ಲೀಲ ಕೃತ್ಯಗಳ ಹೊರತು ಪತ್ನಿಯ ಎಲ್ಲ ಕೆಟ್ಟ ಸ್ವಭಾವಗಳನ್ನು ಮತ್ತು ಕಹಿ ಅನುಭವಗಳನ್ನು ಸಹಿಸಿಕೊಳ್ಳಬೇಕು. ಪುರುಷನಾಗಿ ಮಹಿಳೆಯೊಂದಿಗೆ ಯುದ್ಧ ಮಾಡುವುದು ನಾಚಿಕೆಯ ಸಂಗತಿಯಾಗಿದೆ. ಚಿಕ್ಕ ಪುಟ್ಟ ವಿಷಯಗಳಿಗೆ ಸಂಬಂಧಿಸಿ ಪತ್ನಿಯರೊಂದಿಗೆ ಜಗಳ ಮಾಡುವ ಮತ್ತು ಹೊಡೆಯಲು ಕೈ ಎತ್ತುವ ಪತಿಯಂದಿರು ಜಾಗ್ರತಗೊಳ್ಳಬೇಕಾಗಿದೆ. ಇದು ನಾನು ಹೇಳಿದ ಹಾಗೆ ಬಾಹ್ಯವಾಗಿ ಚಿಕ್ಕದೆಂದು ಕಾಣಿಸುವ ವಿಷಯವಾಗಿದೆ. ಆದರೆ ಇದು ಚಿಕ್ಕ ವಿಷಯವೇನೂ ಅಲ್ಲ. ಕೆಲವು ಪುರುಷರು ಹೇಳುತ್ತಾರೆ: ಪತ್ನಿಯಲ್ಲಿ ಇಂತಿಂತಹ ಕೆಡುಕುಗಳು ಇವೆ ಆ ಕಾರಣದಿಂದ ನಾವು ಕಠಿಣವಾಗಿ ವರ್ತಿಸಬೇಕಾಗುತ್ತದೆ ಎಂದು. ಆದರೆ ಪತಿಯಂದಿರು ಇದಕ್ಕೆ ಸಂಬಂಧಿಸಿ ಸ್ವತಃ ಆತ್ಮಪರಿಶೋಧನೆ ನಡೆಸಬೇಕು– ನಾವು ಧರ್ಮದ ನೈತಿಕ ಮಟ್ಟವನ್ನು ಪೂರ್ಣವಾಗಿ ತಲಪಿದ್ದೇವೆಯೇ ಎಂದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇಂತಹ ಪುರುಷರಿಗೆ ಉಪದೇಶಿಸುತ್ತಾ ಹೇಳುತ್ತಾರೆ: ಪುರುಷನು ಸಾತ್ವಿಕನಾಗಿಲ್ಲವಾದರೆ ಅವನ ಪತ್ನಿ ಸಾತ್ವಿಕಳಾಗಲು ಹೇಗೆ ತಾನೆ ಸಾಧ್ಯ? ಮೊದಲನೆಯ ಶರತ್ತೇನೆಂದರೆ ಪತಿ ಸಾತ್ವಿಕನಾಗಬೇಕು ಆಗ ಪತ್ನಿ ಸಹ ಸಾತ್ವಿಕಳಾಗುವಳು. ನೀವು ಕೇವಲ ಮಾತಿನಿಂದ ಪತ್ನಿಗೆ ಉಪದೇಶ ನೀಡಬೇಡಿರಿ. ಕೃತ್ಯರೂಪದಲ್ಲಿ ನೀವು ಉಪದೇಶ ನೀಡಿದರೆ ಅದರ ಪ್ರಭಾವ ಉಂಟಾಗುತ್ತದೆ. ಒಬ್ಬನು ಅಲ್ಲಾಹನಿಗೆ ಭಯಪಡುವುದಿಲ್ಲವಾದರೆ ಅವನ ಪತ್ನಿ ಅವನನ್ನು ಭಯಪಡುವುದಾದರೂ ಹೇಗೆ. ಪತಿ ರಾತ್ರಿ ಎದ್ದು ಪ್ರಾರ್ಥಿಸುತ್ತಿದ್ದರೆ, ಅತ್ತು ಬೇಡಿಕೊಳ್ಳುತ್ತಾ ಇದ್ದರೆ, ಪತ್ನಿ ಒಂದೆರಡು ದಿನ ಅದನ್ನು ನೋಡುವಳು. ಅನಂತರ ಅವಳು ಸಹ ಖಂಡಿತವಾಗಿ ಅದರಿಂದ ಪ್ರಭಾವಿತಳಾಗುವಳು. ಮಹಿಳೆಯರಲ್ಲಿ ಅನ್ಯರಿಂದ ಪ್ರಭಾವಿತರಾಗುವ ಗುಣ ಬಹಳ ಇರುತ್ತದೆ. ಅವರನ್ನು ತಿದ್ದಲು ಯಾವುದೇ ಶಾಲೆ ಸಾಕಾಗಲಾರದು– ಅವರ ಪತಿಯಂದಿರ ಕೃತ್ಯರೂಪದ ಉದಾಹರಣೆಯಷ್ಟು ಬೇರೆ ಯಾವುದೂ ಪ್ರಭಾವಶಾಲಿಯಾಗದು. ನನ್ನ ಪತಿಯಲ್ಲಿ ಇಂತಿಂತಹ ಕೆಡುಕುಗಳಿವೆ ಎಂದು ಹೇಳುವ ಸಂದರ್ಭ ಪತ್ನಿಯರಿಗೆ ದೊರಕುವಂತೆ ಮಾಡಬಾರದು. ಪತ್ನಿ ಎಷ್ಟು ಪ್ರಯತ್ನ ಮಾಡಿದರೂ ಪತಿಯ ಕೆಡುಕನ್ನು ಕಂಡುಹಿಡಿಯಲು ಸಾಧ್ಯವಾಗದಿದ್ದರೆ ಆಗ ಅವಳು ಧಾರ್ಮಿಕತೆಯ ಬಗ್ಗೆ ಚಿಂತಿಸುವಳು ಮತ್ತು ಧರ್ಮವನ್ನು ಮನವರಿಕೆ ಮಾಡಿಕೊಳ್ಳುವಳು. ಮೊದಲು ಅವಳು ಧಾರ್ಮಿಕ ಆಸಕ್ತಿ ಇಲ್ಲದವಳಾಗಿದ್ದರೂ ಅನಂತರ ಧರ್ಮದ ಕಡೆಗೆ ಗಮನ ಹರಿಸುವಳು.

ಬೈಅತ್ ಮಾಡಿದ ಪುರುಷರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಪ್ರತೀಕ್ಷೆಗಳು ಒಂದು ಕಡೆ ಇರುತ್ತದೆ. ಇನ್ನೊಂದು ಕಡೆ ನಾವು ನೋಡುವುದೇನೆಂದರೆ ಅನೇಕ ಪುರುಷರ ಬಗ್ಗೆ ಅವರ ಪತ್ನಿಯರು ದೂರುಗಳನ್ನು ನೀಡುತ್ತಿದ್ದಾರೆ. ನಮ್ಮ ಪತಿ ನಮಾಝ್‌ಗಳ ಬಗ್ಗೆ ಉದಾಸೀನತೆ ತೋರಿಸುತ್ತಾರೆ. ಬಾಜಮಾಅತ್ ನಮಾಝ್ ವಿಷಯ ಬಿಡಿ ಮನೆಯಲ್ಲಿ ಸಹ ನಮಾಝ್ ಅನುಷ್ಠಿಸುವುದಿಲ್ಲ ಎಂದೆಲ್ಲ ದೂರುತ್ತಾರೆ. ಪುರುಷರ ಧಾರ್ಮಿಕ ಜ್ಞಾನ ಬಲಹೀನವಾಗಿದೆ. ಅನೇಕ ಮನೆಗಳ ಪುರುಷರು ಚಂದ ನೀಡುವ ಬಗ್ಗೆ ಬಲಹೀನರಾಗಿದ್ದಾರೆ. ಟಿ.ವಿ.ಯಲ್ಲಿ ಲಘುವಾದ ಅನಾವಶ್ಯಕ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಾರೆ ಎಂದೆಲ್ಲ ದೂರುಗಳು ಬರುತ್ತಿವೆ. ಮಕ್ಕಳ ತರಬೇತಿ ಬಗ್ಗೆ ನಿರಾಸಕ್ತಿಯ ಬಗ್ಗೆ ಸಹ ಪುರುಷರಿಗೆ ಸಂಬಂಧಿಸಿ ದೂರುಗಳಿವೆ. ಪುರುಷರು ಮನೆಯ ಯಜಮಾನರಾಗಲು ಪ್ರಯತ್ನ ಮಾಡುವುದು ನಿಂದನೆ, ಹೊಡೆತ ಬಡಿತದ ಹೊರತು ಬೇರೆ ರೀತಿಗಳಲ್ಲಲ್ಲ. ಮಹಿಳೆಯರು ಪುರುಷರಿಂದ ಕಲಿತುಕೊಳ್ಳುವುದಕ್ಕೆ ಬದಲಾಗಿ ಅನೇಕ ಮನೆಗಳಲ್ಲಿ ಮಹಿಳೆಯರು ಪುರುಷರಿಗೆ ಕಲಿಸುತ್ತಾ ಇದ್ದಾರೆ. ಅಥವಾ ಪುರುಷರಿಗೆ ಅದರ ಬಗ್ಗೆ ಗಮನ ಹರಿಸಿ ಮಕ್ಕಳು ಬಿಗಡಾಯಿಸದಂತೆ ನೋಡುತ್ತಾರೆ. ಯಾವ ಮನೆಗಳಲ್ಲಿ ಮಕ್ಕಳು ತರಬೇತಿ ರಹಿತರಾಗುತ್ತಾರೋ ಅದಕ್ಕೆ ಕಾರಣ ಪುರುಷರ ನಿರಾಸಕ್ತಿ ಆಗಿರುತ್ತದೆ. ಅಥವಾ ಪತ್ನಿ ಮತ್ತು ಮಕ್ಕಳ ಮೇಲೆ ಪತಿ ನಡೆಸುವ ದೌರ್ಜನ್ಯವಾಗಿರುತ್ತದೆ. ಕೆಲವು ಮಕ್ಕಳು ಸಹ ದೂರುತ್ತಾರೆ– ನಮ್ಮ ತಂದೆ ನಮ್ಮೊಂದಿಗೆ ವರ್ತಿಸುವ ರೀತಿ ಸರಿಯಿಲ್ಲ ಎಂದು.

ಮನೆಗಳನ್ನು ಶಾಂತಿಭರಿತವನ್ನಾಗಿ ಮಾಡಲು, ಮುಂದಿನ ಪೀಳಿಗೆಯ ತರಬೇತಿ ಮಾಡಲು, ಅವರನ್ನು ಧರ್ಮದೊಂದಿಗೆ ಜೋಡಿಸಿಡಲು, ಪುರುಷರು ತಮ್ಮ ಸ್ಥಿತಿಯ ಬಗ್ಗೆ ಗಮನ ಹರಿಸುವುದು ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುರುಷರ ಗಮನ ಹರಿಸುತ್ತಾ ಪುನಃ ಹೇಳುತ್ತಾರೆ: ಪುರುಷ ತನ್ನ ಮನೆಯ ಇಮಾಮ್ ಆಗಿದ್ದಾನೆ. ಅವನೇ ಕೆಟ್ಟ ಪ್ರಭಾವ ಬೀರುವವನಾಗಿದ್ದರೆ ಪರಿಣಾಮ ಏನಾಗಬಹುದು? ಪುರುಷನು ತನ್ನ ಶಕ್ತಿಗಳನ್ನು ಸರಿಯಾದ ಸ್ಥಳದಲ್ಲಿ ಧರ್ಮಬದ್ಧ ರೀತಿಯಲ್ಲಿ ಬಳಸಬೇಕು. ಉದಾಹರಣೆಗೆ ಸಿಟ್ಟು. ಅದು ಮಿತಿಮೀರಿದರೆ ಹುಚ್ಚು ಹಿಡಿಯಲು ಸಾಧ್ಯವಿದೆ. ಯಾರು ಅತ್ಯಂತ ಕೋಪ ಭರಿತನಾಗುತ್ತಾನೋ ಅವನ ಬುದ್ಧಿಯ ಕಾರಂಜಿ ಕಿತ್ತುಕೊಳ್ಳಲ್ಪಡುತ್ತದೆ. ಒಬ್ಬ ವಿರೋಧಿಯೊಂದಿಗೆ ಸಹ ಕೋಪಾವಿಷ್ಟನಾಗಿ ಮಾತನಾಡಬಾರದು.

ನೈತಿಕ ಮಟ್ಟ ಇದಾಗಿದೆ. ಮನೆಯಲ್ಲಿ ಪತ್ನಿ ಮತ್ತು ಮಕ್ಕಳೊಂದಿಗೆ ಕೋಪದಿಂದ ಮಾತನಾಡಬಾರದು. ಅಷ್ಟೇ ಏಕೆ, ವಿರೋಧಿಯಾದವನೊಂದಿಗೆ ಸಹ ಕೋಪದಿಂದ, ಬುದ್ಧಿವಿಹೀನನಾಗಿ ಮಾತನಾಡಬಾರದು. ನಝೂರತ್ ಇಸ್ಲಾಹೋ ಇರ್ಶಾದ್ ಮತ್ತು ಅಧೀನ ಸಂಘಟನೆಗಳು ಇದರ ಬಗ್ಗೆ ಗಮನ ಹರಿಸಬೇಕು. ಲೋಕದ ಎಲ್ಲ ಕಡೆಗಳಲ್ಲೂ ಇದರ ಬಗ್ಗೆ ತರಬೇತಿ ನೀಡುವ ಕಾರ್ಯಕ್ರಮಗಳನ್ನು ಜರಗಿಸಲು ಹೆಚ್ಚು ಗಮನ ಹರಿಸಬೇಕು. ತಬ್ಲೀಗ್ ಮಾಡುವವರ, ಧಾರ್ಮಿಕ

ವಿಷಯಗಳನ್ನು ಕಲಿಯುವವರ ಮನೆಗಳಲ್ಲಿ ನೆಮ್ಮದಿ ರಹಿತ ಸ್ಥಿತಿ ಇದ್ದರೆ ತಬ್ಲೀಗಿನಿಂದ ಯಾವುದೇ ಲಾಭವಿಲ್ಲ.

ಮನೆಗಳಲ್ಲಿ ಕುಟುಂಬ ವ್ಯವಸ್ಥೆ ಮುರಿದು ಬಿದ್ದು ಮಕ್ಕಳು ಹಾಳಾಗುವ ಮೊದಲು ಪುರುಷರು ತಮ್ಮ ಜವಾಬ್ದಾರಿಗಳನ್ನು ಮನವರಿಕೆ ಮಾಡಿಕೊಳ್ಳಬೇಕು. ಪತ್ನಿ ಮತ್ತು ಮಕ್ಕಳಿಗೆ ಸಂಬಂಧಿಸಿ ಇಸ್ಲಾಮ್ ಧರ್ಮ ತಮ್ಮ ಮೇಲೆ ಹೊರಿಸಿರುವ ಹೊಣೆಗಾರಿಕೆಗಳನ್ನು ಅವರು ಅರಿತುಕೊಳ್ಳಬೇಕು. ಮಹಿಳೆಯರ ಹಕ್ಕುಗಳು ಮತ್ತು ಅವರೊಂದಿಗೆ ವರ್ತನೆ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಮ್ಮೆ ಹೀಗೆ ಹೇಳಿದರು: ಮಹಿಳೆಯರ ಹಕ್ಕುಗಳನ್ನು ಇಸ್ಲಾಮ್ ಎಷ್ಟು ಸಂರಕ್ಷಿಸಿದೆಯೋ ಅಷ್ಟು ಸಂರಕ್ಷಣೆ ಬೇರೆ ಯಾವ ಧರ್ಮವೂ ಖಂಡಿತವಾಗಿ ಮಾಡಿಲ್ಲ. ಆ ಕುರಿತು ಪವಿತ್ರ ಖುರ್‌ಆನಿನ ಸಂಕ್ಷಿಪ್ತವಾದೊಂದು ನಿರ್ದೇಶ ಈ ರೀತಿಯಿದೆ. وَلَهُنَّ مِثْلُ الَّذِي عَلَيْهِنَّ **ವಲಹುನ್ನ ಮಿಸ್‌ಲುಲ್ಲಝೀ ಅಲೈಹಿನ್ನ** ಪುರುಷರಿಗೆ ಮಹಿಳೆಯರ ಮೇಲೆ ಹಕ್ಕುಗಳು ಇರುವ ಹಾಗೆ ಮಹಿಳೆಯರಿಗೂ ಪುರುಷರ ಮೇಲೆ ಹಕ್ಕುಗಳು ಇವೆ.

ಒಟ್ಟಿನಲ್ಲಿ, ಪತ್ನಿಯರೊಂದಿಗೆ ಎಂತಹ ಸಂಬಂಧವಿರಬೇಕೆಂದರೆ ಇಬ್ಬರು ಸತ್ಯ ಸಂಧರಾದ ನೈಜ ಸ್ನೇಹಿತರ ಮಧ್ಯೆ ಇರುವ ಸಂಬಂಧದ ಹಾಗೆ. ಮನುಷ್ಯನ ಸದ್ಗುಣಗಳ ಬಗ್ಗೆ, ಅಲ್ಲಾಹನೊಂದಿಗೆ ಸಂಬಂಧದ ಬಗ್ಗೆ ಪ್ರಥಮ ಸಾಕ್ಷ್ಯ ನೀಡಬಲ್ಲವರು ಪತ್ನಿಯರೇ ಆಗಿರುತ್ತಾರೆ. ಪತ್ನಿಯೊಂದಿಗೆ ಸಂಬಂಧ ಒಳ್ಳೆಯದಾಗಿರದಿದ್ದರೆ ಅಲ್ಲಾಹನೊಂದಿಗೆ ಸಮಬಂಧ ಸರಿಯಾಗಿರುವುದು ಹೇಗೆ?

ಪುರುಷರು ತಂದೆ ಎಂಬ ತಮ್ಮ ಸ್ಥಾನದ ಹೊಣೆಗಾರಿಕೆಗಳನ್ನು ಮನವರಿಕೆ ಮಾಡುವುದು ಆವಶ್ಯಕವಾಗಿದೆ. ಮಕ್ಕಳ ತರಬೇತಿ ತಾಯಿಯ ಹೊಣೆಗಾರಿಕೆ ಮಾತ್ರವಾಗಿದೆ ಎಂದು ಭಾವಿಸಬಾರದು. ನಿಸ್ಸಂಶಯವಾಗಿ ಒಂದು ನಿರ್ದಿಷ್ಟ ಪ್ರಾಯದ ತನಕ ಮಗು ತಾಯಿಯ ಜೊತೆ ಇರುತ್ತದೆ. ಶೈಶವ ಕಾಲದಲ್ಲಿ ತಾಯಿಯು ನೀಡುವ ತರಬೇತಿ ಬಹಳ ಪ್ರಮುಖ ಪಾತ್ರವಹಿಸುತ್ತದೆ. ಆದರೆ ತಂದೆ ತನಗೇನೂ ಹೊಣೆಗಾರಿಕೆ ಇಲ್ಲ ಎಂದು ಭಾವಿಸಬಾರದು. ತಂದೆ ಸಹ ಮಕ್ಕಳ ತರಬೇತಿಗೆ ತನ್ನ ಕರ್ತವ್ಯ ನಿರ್ವಹಿಸಬೇಕು. ವಿಶಿಷ್ಟವಾಗಿ ಗಂಡು ಮಕ್ಕಳು ಏಳೆಂಟು ವರ್ಷ ಪ್ರಾಯದವರು ಆಗುವಾಗ ಅವರ ಕಡೆಗೆ ತಂದೆ ಗಮನ ಹರಿಸುವುದು ಆವಶ್ಯಕವಾಗುತ್ತದೆ. ಹಾಗೆ ಮಾಡದಿದ್ದರೆ, ವಿಶಿಷ್ಟವಾಗಿ ಇಲ್ಲಿನ ಪಾಶ್ಚಿಮಾತ್ಯ ಪರಿಸರದಲ್ಲಿ, ಮಕ್ಕಳು ಬಿಗಡಾಯಿಸಲು ಸಾಧ್ಯತೆಗಳು ಹೆಚ್ಚಿಗೆ ಇವೆ. ತಂದೆಯಂದಿರು ಮಕ್ಕಳನ್ನು ಗೌರವಿಸಿ ಅವರ ಸ್ವಭಾವ ಒಳ್ಳೆಯದಾಗುವಂತೆ ಮಾಡಬೇಕಲ್ಲದೆ ಅವರ ಮೇಲೆ ಗಾಢವಾಗಿ ದೃಷ್ಟಿ ಇರಿಸುವುದು ಸಹ ಆವಶ್ಯಕವಾಗಿದೆ. ಏಕೆಂದರೆ ಅವರನ್ನು ಇಲ್ಲಿನ ಪರಿಸರದ ಕೆಟ್ಟ ಪ್ರಭಾವದಿಂದ ರಕ್ಷಿಸಬೇಕಾಗಿದೆ. ಮಕ್ಕಳ ತರಬೇತಿಗೆ ಕೃತ್ಯರೂಪದಲ್ಲಿ ಗಮನ ಹರಿಸುವುದರೊಂದಿಗೆ ಅವರ ಬಗ್ಗೆ ಅಲ್ಲಾಹನೊಡನೆ ಪ್ರಾರ್ಥಿಸುತ್ತಲೂ ಇರಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸರಿಯಾದ ಮಾರ್ಗದರ್ಶನ ಮತ್ತು ತರಬೇತಿ ಅಲ್ಲಾಹನ ಕೆಲಸವೇ ಆಗಿದೆ. ಬಹಳ ಹೆಚ್ಚು ಹಿಂಬಾಲಿಸುತ್ತಾ ಇರುವುದು ಮತ್ತು ಒಂದು ವಿಷಯದ ಬಗ್ಗೆ ಮಿತಿಮೀರಿ ಒತ್ತಿ ಹೇಳುವುದು, ನಾವೇ ಮಾರ್ಗದರ್ಶನದ ಮಾಲಿಕರೆಂದು ಗಣಿಸುವಂತಾಗುತ್ತದೆ. ನಾವು ನಮ್ಮ ಇಚ್ಚೆ ಪ್ರಕಾರ ಅವರನ್ನು ಒಂದು ದಾರಿಗೆ ತರುವೆವು ಎಂದು ಯೋಚಿಸುವುದು ಒಂದು ರೀತಿಯ ರಹಸ್ಯ ಶಿರ್ಕ್ (ಬಹುದೇವಾರಾಧನೆ) ಆಗಿದೆ. ನಮ್ಮ ಜಮಾಅತಿನವರು ಇದರಿಂದ ದೂರ ಸರಿಯಬೇಕು. ನಾವು ನಮ್ಮ ಮಕ್ಕಳ ಪರವಾಗಿ ಪ್ರಾರ್ಥಿಸುತ್ತೇವೆ. ಅನಂತರ ಪಾಠ ಕಲಿಸುತ್ತೇವೆ. ಇದಕ್ಕಿಂತ ಹೆಚ್ಚಿಗೆ ಏನೂ ಇಲ್ಲ. ನಾವು ನಮ್ಮ ಪೂರ್ಣ ಭರವಸೆ ಅಲ್ಲಾಹನ ಮೇಲೆ ಇಟ್ಟಿದ್ದೇವೆ. ಯಾರಲ್ಲಾದರೂ ಸಾತ್ವಿಕತೆಯ ಬೀಜ ಇದ್ದರೆ ಅದು ಕಾಲಾಂತರದಲ್ಲಿ ಹಚ್ಚಹಸುರಾದ ವೃಕ್ಷವಾಗುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಲವರು ಮಕ್ಕಳಿಗೋಸ್ಕರ ಸಂಪತ್ತು ಬಿಟ್ಟು ಹೋಗಲು ಬಯಸುತ್ತಾರೆ. ನನಗೆ ಆಶ್ಚರ್ಯವಾಗುವುದೇನೆಂದರೆ ಮಕ್ಕಳಿಗೋಸ್ಕರ ಸಂಪತ್ತು ಬಿಟ್ಟು ಹೋಗುವ ಬಗ್ಗೆ ಅವರು ಯೋಚಿಸುತ್ತಾರೆ. ಆದರೆ ತಮ್ಮ ಮಕ್ಕಳು ಸಾತ್ವಿಕರಾಗಬೇಕು ನಮ್ಮ ಮಕ್ಕಳು ಕೆಟ್ಟವರಾಗಬಾರದು ಎಂದು ಅವರು ಯೋಚಿಸುವುದೇ ಇಲ್ಲ. ಅವರಿಗೆ ಅದರ ಬಗ್ಗೆ ಲಕ್ಷ್ಯವೇ ಇಲ್ಲ. ಅಲ್ಲಾಹನು ಹೇಳುತ್ತಾನೆ: وَهُوَ يَتَوَلَّى الصَّالِحِينَ **ವಹುವ ಯತವಲ್ಲ ಸ್ಸಾಲಿಹೀನ್.** (ಅಲ್ಲಾಹನು ಸಾತ್ವಿಕರ ಸಂರಕ್ಷಕನಾಗಿರುತ್ತಾನೆ) ಎಂದು. ಮಕ್ಕಳು ದುರ್ಜನರಾಗಿದ್ದರೆ ಅವರಿಗೋಸ್ಕರ ಲಕ್ಷಗಟ್ಟಲೆ ರೂಪಾಯಿಗಳನ್ನು ಬಿಟ್ಟು ಹೋದರೂ ಅವರು ದುರ್ವ್ಯಯ ಮಾಡಿ ಸಂಪತ್ತನ್ನು ನಾಶಗೊಳಿಸುವರು. ಅದರ ಪರಿಣಾಮವಾಗಿ ಅವರು ಕಷ್ಟಗಳಿಗೂ ವಿಪತ್ತುಗಳಿಗೂ ಅನಿವಾರ್ಯವಾಗಿ ಪಾತ್ರರಾಗುವರು.

ಇಸ್ಲಾಮ್ ತಂದೆಯೊಂದಿಗೆ ತನ್ನ ಮಕ್ಕಳ ತರಬೇತಿ ಬಗ್ಗೆ ಗಮನ ಹರಿಸಲು ಮತ್ತು ಅವರಿಗೋಸ್ಕರ ಪ್ರಾರ್ಥಿಸಲು ಹೇಳುತ್ತದೆಯಲ್ಲದೆ ಮಕ್ಕಳಿಗೂ ಹೀಗೆ ಆಜ್ಞೆ ನೀಡುತ್ತದೆ: ನಿಮ್ಮ ಮೇಲೆ ಸಹ ಕೆಲವು ಹೊಣೆಗಾರಿಕೆಗಳಿವೆ. ನೀವು ಪ್ರಾಪ್ತ ವಯಸ್ಕರಾದ ನಂತರ ತಂದೆ ತಾಯಂದಿರ ಬಗ್ಗೆ ಕೆಲವು ಹಕ್ಕುಗಳಿವೆ. ಅವುಗಳನ್ನು ನೀವು ಈಡೇರಿಸಬೇಕಾಗಿದೆ ಎಂದು. ಇವು ಸಂಬಂಧಗಳ ಹಕ್ಕುಗಳ ಕೊಂಡಿಗಳಾಗಿವೆ. ಒಂದು ಇನ್ನೊಂದರೊಂದಿಗೆ ಜೋಡಿಸಿರುವಾಗ ನೆಮ್ಮದಿ ಭರಿತ ಸಮಾಜ ಸೃಷ್ಟಿಸಲ್ಪಡುತ್ತದೆ. ತಂದೆ ತಾಯಂದಿರಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುವುದು ಎಷ್ಟು ದೊಡ್ಡ ಹೊಣೆಗಾರಿಕೆಯಾಗಿದೆ, ಇದರ ಬಗ್ಗೆ ಅರಿವು ಪ್ರತಿಯೊಬ್ಬ ಸತ್ಯವಿಶ್ವಾಸಿ ಗಳಿಸಿರಬೇಕು. ಒಬ್ಬ ಹುಡುಗ ಯುವಕನಾದಾಗ ತನ್ನ ತಂದೆ ತಾಯಂದಿರ ಹಕ್ಕುಗಳನ್ನು ಹೇಗೆ ಈಡೇರಿಸಬೇಕು ಎನ್ನುವುದರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಸಂದರ್ಭದಲ್ಲಿ ಹೀಗೆ ಹೇಳಿದ್ದರು: ಒಬ್ಬ ಯುವಕ ಬಂದು 'ನಾನು ಜಿಹಾದ್‌ಗೆ ಹೋಗಲು ಬಯಸುತ್ತೇನೆ' ಎಂದು ಹೇಳಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ ಕೇಳಿದರು: 'ನಿನ್ನ ತಂದೆ ತಾಯಿ ಜೀವಿಸಿದ್ದಾರೆಯೇ?' ಆ ಯುವಕ ಹೇಳಿದ: ಅವರು ಜೀವಿಸಿದ್ದಾರೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀನು ಅವರಿಬ್ಬರ ಸೇವೆ ಮಾಡು. ಅದು ನೀನು ಮಾಡುವ ಜಿಹಾದ್ ಆಗಿದೆ.

ಒಬ್ಬ ಸಹಾಬಿ ಹೇಳುತ್ತಾರೆ: ಒಮ್ಮೆ ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿ ಉಪಸ್ಥಿತರಿದ್ದೆವು. ಆಗ ಬನೀ ಸಲ್ಮ ಗೋತ್ರದ ಒಬ್ಬ ವ್ಯಕ್ತಿ

ಬಂದು ಕೇಳಿದರು: ತಂದೆ ತಾಯಂದಿರು ಮೃತರಾದ ನಂತರ ಅವರಿಗೋಸ್ಕರ ನಾನು ಮಾಡಬಹುದಾದ ಯಾವುದಾದರೂ ಸತ್ಕರ್ಮವಿದೆಯೇ? ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀನು ಅವರಿಗೋಸ್ಕರ ಪ್ರಾರ್ಥಿಸು. ಅವರನ್ನು ಕ್ಷಮಿಸಬೇಕೆಂದು ಅಲ್ಲಾಹನನ್ನು ಬೇಡಿಕೊಳ್ಳು. ಅವರು ಯಾರೊಂದಿಗಾದರೂ ಏನಾದರೂ ವಾಗ್ದಾನ ಮಾಡಿದ್ದರೆ ಅದನ್ನು ಈಡೇರಿಸು. ಅವರು ತಮ್ಮ ಸಂಬಂಧಿಕರೊಂದಿಗೆ ಯಾವರೀತಿ ಕಾರುಣ್ಯಮಯವಾಗಿ ಒಳ್ಳೆಯ ಸಂಬಂಧವಿರಿಸಿದ್ದರೋ ಅದೇ ರೀತಿಯ ಸಂಬಂಧ ಅವರೊಂದಿಗೆ ಇರಿಸು. ಅವರ ಸ್ನೇಹಿತರೊಂದಿಗೆ ಗೌರವದಿಂದ ವರ್ತಿಸು.

ವಿವಾಹದ ನಂತರ ಈ ಕರ್ತವ್ಯಗಳ ಬಗ್ಗೆ ಗಮನ ಹರಿಸುವುದು ಆವಶ್ಯಕವಾಗಿದೆ. ಮನುಷ್ಯನು ತನ್ನ ಪತ್ನಿಯ ಹಕ್ಕುಗಳನ್ನು ಈಡೇರಿಸಿ ಕೊಡುತ್ತಾ ತನ್ನ ತಂದೆ ತಾಯಂದಿರ ಸೇವೆ ಮಾಡುತ್ತಾ ಇದ್ದರೆ ಪತ್ನಿ ಸಹ ಅವನ ವರ್ತನೆಯಿಂದ ಪ್ರಭಾವಿತಳಾಗಿ ಅತ್ತೆ ಮಾವಂದಿರ ಮಹತ್ವವನ್ನು ಅರಿತು ಕೊಳ್ಳುವಳು. ಮತ್ತು ತನ್ನ ಅತ್ತೆ ಮಾವಂದಿರ ಸೇವೆ ಮಾಡುವಳು. ಹೀಗಾದರೆ ಮನೆಯಲ್ಲಿ ಎಂದೂ ಜಗಳ ಇರಲಾರದು. ಕೆಲವು ಸಾರಿ ಧಾರ್ಮಿಕ ಭಿನ್ನಾಭಿಪ್ರಾಯದ ಕಾರಣದಿಂದ ತಂದೆ–ಮಕ್ಕಳಲ್ಲಿ ಕಲಹ ತಲೆದೋರುತ್ತದೆ. ಹೊಸದಾಗಿ ಬೈಅತ್ ಮಾಡಿದ ಕೆಲವರು ಇಂತಹ ಪ್ರಶ್ನೆ ಕೇಳುತ್ತಾರೆ. ಮಗ ತನ್ನ ತಂದೆಯೊಂದಿಗೆ ಉತ್ತಮವಾಗಿ ವರ್ತಿಸಬೇಕು. ಅವರ ಸೇವೆ ಮಾಡಬೇಕು. ಇದಕ್ಕೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವರಿಸಿರುವರು. ಒಬ್ಬ ವ್ಯಕ್ತಿ ಹೀಗೆ ಕೇಳಿದರು: ತಂದೆ ತಾಯಂದಿರ ಸೇವೆ ಮಾಡುವುದು ಮತ್ತು ಅವರನ್ನು ಅನುಸರಿಸುವುದು ಅಲ್ಲಾಹನು ಕಡ್ಡಾಯ ಕರ್ತವ್ಯವಾಗಿ ಮಾಡಿದ್ದಾನೆ. ನಾನು ತಮ್ಮನ್ನು ಬೈಅತ್ ಮಾಡಿದ ಕಾರಣ ನನ್ನ ತಂದೆ ತಾಯಂದಿರು ಬಹಳ ಬೇಸರಗೊಂಡಿದ್ದಾರೆ. ಅವರಿಗೆ ನನ್ನನ್ನು ನೋಡಲು ಸಹ ಇಷ್ಟವಿಲ್ಲ. ನಾನು ತಮ್ಮ ಬಳಿಗೆ ಬೈಅತ್ ಮಾಡಲು ಹೊರಟು ಬಂದಾಗ ಅವರು ಹೇಳಿದರು: ನೀನು ನಮಗೆ ಪತ್ರ ಸಹ ಬರೆಯಬೇಡ. ನಿನ್ನನ್ನು ನೋಡಲು ಸಹ ನಾವು ಇಷ್ಟಪಡುವುದಿಲ್ಲ ಎಂದು ಹೇಳಿದರು. ನಾನು ಅಲ್ಲಾಹನು ವಿಧಿಸಿದ ಕಡ್ಡಾಯ ಕರ್ತವ್ಯವನ್ನು ಹೇಗೆ ಈಡೇರಿಸುವುದು?

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ತಂದೆ ತಾಯಂದಿರನ್ನು ಅನುಸರಿಸಲು ಮತ್ತು ಅವರಿಗೆ ಸೇವೆ ಮಾಡಲು ಆಜ್ಞಾಪಿಸುವುದರೊಂದಿಗೆ ಹೀಗೆ ಹೇಳಿದ್ದಾನೆ: رَّبُّكُمْ أَعْلَمُ بِمَا فِي نُفُوسِكُمْ ۚ إِن تَكُونُوا صَالِحِينَ فَإِنَّهُ كَانَ لِلْأَوَّابِينَ غَفُورًا **ರಬ್ಬುಕುಮ್ ಅಅ್‌ಲಮು ಬಿಮಾಫೀ ನುಫೂಸಿಕುಮ್. ಇನ್‌ತಕೂನೂ ಸಾಲಿಹೀನ ಫಇನ್ನಹು ಕಾನಲಿಲ್ ಅವ್ವಾಬೀನ ಗಫೂರ.** ನಿಮ್ಮ ಹೃದಯಗಳಲ್ಲಿ ಏನಿದೆ ಎಂದು ಅಲ್ಲಾಹನು ಚೆನ್ನಾಗಿ ತಿಳಿದುಕೊಂಡಿದ್ದಾನೆ. ನೀವು ಸಾತ್ವಿಕರಾಗಿದ್ದರೆ ಅಲ್ಲಾಹನು ತನ್ನ ಕಡೆಗೆ ಬಾಗುವವರಿಗೋಸ್ಕರ ಗಫೂರ್ (ಅತ್ಯಂತ ಕ್ಷಮೆ ನೀಡುವವನು) ಆಗಿದ್ದಾನೆ.

ಸಹಾಬರಿಗೆ ಸಹ ಇದೇ ರೀತಿಯ ಕಷ್ಟ ಪರಿಸ್ಥಿತಿ ಉಂಟಾಗಿತ್ತು. ಧಾರ್ಮಿಕವಾದ ನಿರ್ಬಂಧಿತ ಅವಸ್ಥೆಯ ಕಾರಣ ಅವರು ತಮ್ಮ ತಂದೆ ತಾಯಂದಿರೊಂದಿಗೆ ವಿಷಮಸ್ಥಿತಿಯಲ್ಲಿದ್ದರು. ನೀವು ನಿಮ್ಮ ತಂದೆ ತಾಯಂದಿರ ಸೇವೆಗೋಸ್ಕರ ಯಾವಾಗಲೂ ಸಿದ್ಧರಾಗಿರಿ. ಸೇವೆಯ ಸಂದರ್ಭ ದೊರೆತರೆ ಆ ಸಂದರ್ಭ ಕಳಕೊಳ್ಳಬೇಡಿರಿ. ನಿಮ್ಮ ಸಂಕಲ್ಪದ ಪುಣ್ಯ ನಿಮಗೆ ದೊರಕುವುದು. ಆದರೆ ಧರ್ಮಕ್ಕೋಸ್ಕರ ಮತ್ತು ಅಲ್ಲಾಹನ ಸಂಪ್ರೀತಿಗಳಿಸಲು ತಂದೆ ತಾಯಂದಿರಿಂದ ಬೇರ್ಪಡಬೇಕಾಗಿ ಬಂದರೆ ಅದೊಂದು ಅನಿವಾರ್ಯ ಸ್ಥಿತಿಯಾಗಿದೆ. ನೀವು ನಿಮ್ಮ ಕಡೆಯಿಂದ ತಂದೆ ತಾಯಂದಿರ ಹಕ್ಕುಗಳನ್ನು ಈಡೇರಿಸಿಕೊಡಲು ಪ್ರಯತ್ನಿಸಿರಿ. ಅವರಿಗೋಸ್ಕರ ಪ್ರಾರ್ಥಿಸಿರಿ. ಅವರ ಆರೋಗ್ಯದ ಬಗ್ಗೆ ಗಮನಿಸಿರಿ. ನಿಮ್ಮ ಸಂಕಲ್ಪ ಸರಿಯಾಗಿರಬೇಕು. ಈಗ ಸಹ ಅನೇಕರು ಕೇಳುತ್ತಾರೆ. ತಂದೆ ತಾಯಂದಿರಿಗೆ ಸಂಬಂಧಿಸಿ ಸಹ ಕರ್ತವ್ಯಗಳಿವೆ. ಅವುಗಳನ್ನು ಹೇಗೆ ಈಡೇರಿಸುವುದು ಎಂದು ವಿಚಾರಿಸುತ್ತಾರೆ. ಅವರಿಗೆಲ್ಲಾ ಮೇಲಿನ ಉತ್ತರ ಪರ್ಯಾಪ್ತವಾಗಿದೆ.

ಒಟ್ಟಿನಲ್ಲಿ ಪುರುಷನಿಗೆ ವಿವಿಧ ನೆಲೆಗಳಲ್ಲಿ ಇರುವ ಹೊಣೆಗಾರಿಕೆಗಳನ್ನು ಈಡೇರಿಸಲು ಪ್ರಯತ್ನ ಮಾಡುತ್ತಾ ಇರಬೇಕು. ಮನೆಯಲ್ಲಿ ಯಾವಾಗಲೂ ಪ್ರೀತಿಯ ವಾತಾವರಣವಿರುವಂತೆ ಮಾಡಬೇಕು. ಒಬ್ಬ ಪುರುಷನು ಪತಿ, ತಂದೆ ಮತ್ತು ಮಗನೂ ಆಗಿರುತ್ತಾನೆ. ಅವನು ಈ ನೆಲೆಗಳಲ್ಲಿ ತನ್ನ ಹೊಣೆಗಾರಿಕೆಗಳನ್ನು ಅರಿತುಕೊಳ್ಳಬೇಕು. ಪುರುಷರಿಗೆ ಇತರ ಅನೇಕ ಸ್ಥಾನಗಳು ಸಹ ಇವೆ. ನಾನು ಈಗ ಕೇವಲ ಮೂರರ ಬಗ್ಗೆ ಪ್ರಸ್ತಾಪಿಸಿದ್ದೇನೆ. ಮನೆ ಸಮಾಜದ ಮೂಲ ಘಟಕವಾಗಿದೆ. ಮನೆಯನ್ನು ಸಮಾಜದ ಶಾಂತಿಗೆ ಖಾತರಿ ನೀಡುವುದನ್ನಾಗಿ ಮಾಡಬಹುದಾಗಿದೆ. ಈ ಮೂಲ ಘಟಕದಲ್ಲಿ ಶಾಂತಿ ನೆಲಸಬೇಕು. ಮತ್ತು ಹೆಚ್ಚು ಸೌಂದರ್ಯ ಗಳಿಸಲು ಪ್ರಯತ್ನಿಸಬೇಕು. ಅಲ್ಲಾಹನು ಎಲ್ಲರಿಗೂ ಹೀಗೆ ಮಾಡುವ ಸೌಭಾಗ್ಯ ದಯಪಾಲಿಸಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis(atba)***

*At, Masjid Baithul Futhuh, London on 19-05-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon